

# ಜಾಣೆ ಪ್ರಿಯಾಂಕಾ

ಪ್ರಿಯಾಂಕಾ ಚೋಪ್ರಾ ಜಾಣೆ ಎನ್ನುವುದು ಮತ್ತೆ ಮತ್ತೆ ಸಾಬೀತಾಗುತ್ತಲೇ ಇದೆ. ಆಕೆ ಬಹುಕಾಲದ ಬಳಿಕ ನಟಿಸಿರುವ 'ದಿ ಸ್ಕೈ ಈಸ್ ಪಿಂಕ್' ಚಿತ್ರ ಮುಂದಿನ ವಾರ ಬಿಡುಗಡೆ ಆಗಲಿದೆ. ಅದಕ್ಕೂ ಮುನ್ನ ಚಿತ್ರಕ್ಕೆ ಅತ್ಯಧಿಕ ಆರಂಭಿಕ ಪ್ರಚಾರ ಸಿಗುವಂತೆ ನೋಡಿಕೊಳ್ಳಲು ಎಲ್ಲ ಅವಕಾಶಗಳನ್ನೂ ಆಕೆ ಬಳಸಿಕೊಳ್ಳುತ್ತಿದ್ದಾಳೆ. ಕಳೆದ ವಾರ ಪ್ರಿಯಾಂಕಾ 'ಡಾನ್ಸ್ ಇಂಡಿಯಾ ಡಾನ್ಸ್' ಟೀವಿ ರಿಯಾಲಿಟಿ ಷೋ ಸೆಟ್‌ಗೆ ಹೋಗಿದ್ದಾಳೆ. ಅಲ್ಲಿ ಜಡ್ಜ್ ಆಗಿ ಕುಳಿತಿದ್ದ ಕರೀನಾ ಕಪೂರ್‌ಗಳನ್ನು ಭೇಟಿಯಾಗಿ, ತನ್ನ ಹೊಸ ಚಿತ್ರದ ಪ್ರಚಾರವನ್ನು ಭರ್ಜರಿಯಾಗಿ ನಡೆಸಿದ್ದಾಳೆ. ಪ್ರಿಯಾಂಕಾಳ ನಡವಳಿಕೆಯಿಂದ ಖುಷ್ ಆದ ಕರೀನಾ ಹೊಗಳಿಕೆಯ ಹೊನ್ನಮಳೆಯನ್ನೇ ಸುರಿಸಿದಳಂತೆ. ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಇದನ್ನು ಹಂಚಿಕೊಂಡ ಪ್ರಿಯಾಂಕಾ ತನ್ನ ಚಿತ್ರಕ್ಕೆ ಇನ್ನಷ್ಟು ಪ್ರಚಾರ ಸಿಗುವಂತೆ ನೋಡಿಕೊಂಡಿದ್ದಾಳೆ.

ಪ್ರಿಯಾಂಕಾ ಮತ್ತು ಹಾಲಿವುಡ್ ಗಾಯಕ ನಿಕ್ ಜೊನಾಸ್ ಮದುವೆಗೆ ಇನ್ನೆರಡು ತಿಂಗಳಲ್ಲಿ ಭರ್ತಿ ಒಂದು ವರ್ಷ ತುಂಬುತ್ತದೆ. ಆದರೆ ಈ ಗಂಡ– ಹೆಂಡಿರ ಹನಿಮೂನ್ ಸುತ್ತಾಟ ಇನ್ನೂ ಮುಗಿದಿಲ್ಲ. ಹೋದಲ್ಲಿ ಬಂದಲ್ಲಿ ತನ್ನ ಗಂಡನನ್ನು ಹೊಗಳುವುದೇ ಪ್ರಿಯಾಂಕಾಳಿಗೆ ಚಟವಾದಂತಿದೆ. ಇತ್ತೀಚೆಗೆ ನೀಡಿದ ಒಂದು ಸಂದರ್ಶನದಲ್ಲಿ, 'ನಿಕ್‌ಗೆ ನನ್ನ ತಂದೆಯ ಗುಣಗಳು ಬಂದಿವೆ. ನನ್ನನ್ನು ತುಂಬ ಪ್ರೀತಿಯಿಂದ, ಜೋಪಾನವಾಗಿ ನೋಡಿಕೊಳ್ಳುತ್ತಿದ್ದಾನೆ' ಎಂದಿದ್ದಾಳೆ.

'ಭಾರತ್' ಸಿನಿಮಾದಲ್ಲಿ ಮೊದಲು ನಟಿಸಲು ಒಪ್ಪಿ ಬಳಿಕ ಹಿಂದೆ ಸರಿದ ಪ್ರಿಯಾಂಕಾಳ ಕ್ರಮ, ಅದರ ಹೀರೊ ಸಲ್ಮಾನ್ ಖಾನ್‌ಗೆ ಸಖತ್ ಸಿಟ್ಟು ತರಿಸಿತ್ತು. ಒಂದೆರಡು ಬಾರಿ ಸಲ್ಲೂ ಮಿಯಾ, ಈಕೆಯ ಬಗ್ಗೆ ಪರೋಕ್ಷವಾಗಿ ವ್ಯಂಗ್ಯದ ಟೀಕಾಸ್ತ್ರಗಳನ್ನೂ ಎಸೆದಿದ್ದ. ಈ ಬಗ್ಗೆ ಪತ್ರಕರ್ತರು ಪ್ರಶ್ನಿಸಿದರೆ, 'ಅಂತಹದ್ದು ಏನೂ ಇಲ್ಲ. ಸಲ್ಮಾನ್ ನಮ್ಮ ಮದುವೆ ರಿಸೆಪ್ಷನ್‌ಗೆ ಬಂದಿದ್ದ. ನಾವೂ ಆತನ ಮನೆಗೆ ಹೋಗಿ ಬಂದಿದ್ದೇವೆ. ಸಲ್ಮಾನ್ ತಂಗಿ ಅರ್ಪಿತಾ ನನ್ನ ಕ್ಲೋಸ್ ಫ್ರೆಂಡ್' ಎಂದು ಜಾಣ್ಮೆಯ ಉತ್ತರ ನೀಡಿದ್ದಾಳೆ ಪ್ರಿಯಾಂಕಾ. ■

# ತಮಿಳಿನಲ್ಲಿ ಐಶ್ವರ್ಯ

'ನಿರ್ದೇಶಕ ಮಣಿರತ್ನಂ ನನ್ನ ಗುರು' ಎನ್ನುವುದು ಐಶ್ವರ್ಯ ರೈ ಸದಾ ಹೇಳುವ ಮಾತು. ಈಗ ಅದನ್ನೇ ಮತ್ತೆ ಪುನರುಚ್ಚರಿಸಿದ್ದಾಳೆ. ಅದಕ್ಕೆ ಕಾರಣ ಮಣಿರತ್ನಂ ಅವರ ಹೊಸ ಚಿತ್ರ 'ಪೊನ್ನಿಯಿನ್ ಸೆಲ್ವನ್'ನಲ್ಲಿ ಆಕೆಗೆ ಡಬಲ್ ರೋಲ್ ಸಿಕ್ಕಿರುವುದು. ಬಲ್ಲ ಮೂಲಗಳ ಪ್ರಕಾರ, ಚಿತ್ರದ ಶೂಟಿಂಗ್ ಡಿಸೆಂಬರ್‌ನಲ್ಲಿ ಥಾಯ್ಲೆಂಡ್‌ನಲ್ಲಿ ಆರಂಭವಾಗಲಿದೆ. ಕಲ್ಕಿ ಕೃಷ್ಣಮೂರ್ತಿ ತಮಿಳಿನಲ್ಲಿ ಬರೆದ ಅದೇ ಹೆಸರಿನ ಕಾದಂಬರಿ ಚಿತ್ರವಾಗುತ್ತಿದೆ. ಈ ಪೀರಿಯಡ್ ಸಿನಿಮಾದಲ್ಲಿ, ಚೋಳ ಅರಸೊತ್ತಿಗೆಯ ಪತನಕ್ಕೆ ಕಾರಣಳಾದ ನಂದಿನಿಯ ಪಾತ್ರ ಐಶ್ವರ್ಯಳದ್ದು. ಮಹಾರಾಜನ ಬೊಕ್ಕಸದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಪೆರಿಯ ಫಲವೆಟ್ಟರೈಯರ್‌ರ ಪತ್ನಿಯೇ ನಂದಿನಿ. ಜೊತೆಗೆ ಮಹಾರಾಣಿ ಮಂದಾಕಿನಿ ದೇವಿಯ ಪಾತ್ರವೂ ಈಕೆಯದ್ದೇ ಅಂತೆ.

ದಕ್ಷಿಣದ ಘಟಾನುಘಟಿ ನಟ, ನಟಿಯರೆಲ್ಲ ಈ ಚಿತ್ರದಲ್ಲಿದ್ದಾರೆ. ಮೋಹನ್ ಬಾಬು, ಚಿಯಾನ್ ವಿಕ್ರಂ, ಕಾರ್ತಿ, ಜಯಂ ರವಿ, ನಾಸಿರ್, ಸತ್ಯರಾಜ್, ನಯನತಾರಾ, ಅನೂಷ್ಕಾ ಶೆಟ್ಟಿ, ಕೀರ್ತಿ ಸುರೇಶ್, ಅಮಲಾ ಪೌಲ್– ಹೀಗೆ ಮಣಿ ಸಾಹೇಬರ ತಾರಾಗಣದ ಪಟ್ಟಿ ಉದ್ದವಿದೆ. ಎ.ಆರ್.ರೆಹಮಾನ್ ಸಂಗೀತ ನಿರ್ದೇಶನಕ್ಕೆ ವೈರಮುತ್ತು 12 ಹಾಡುಗಳನ್ನು ಬರೆದಿದ್ದಾರಂತೆ. ಈ ಮಧ್ಯೆ 'ಮಿ ಟೂ' ಪ್ರಕರಣವೊಂದರಲ್ಲಿ ಆರೋಪಿಯಾಗಿರುವ ವೈರಮುತ್ತು ಜೊತೆ ಕೆಲಸ ಮಾಡಬಾರದೆಂದು ಕೆಲವರು ಚಿತ್ರತಂಡದ ಮೇಲೆ ಒತ್ತಡ ಹೇರಿದ್ದಾರಂತೆ.

ಐಶ್ವರ್ಯ ರೈ ಚಿತ್ರರಂಗಕ್ಕೆ ಕಾಲಿಟ್ಟದ್ದೇ ಮಣಿರತ್ನಂ ಅವರ 'ಇರುವರ್' ಚಿತ್ರದ ಮೂಲಕ. ಅದು ಎಂಜಿಆರ್ ಜೀವನ ಕುರಿತು ಸಿನಿಮಾ. ಆ ಬಳಿಕ ಧೀರೂಭಾಯಿ ಅಂಬಾನಿ ಜೀವನ ಆಧಾರಿತ ಎನ್ನಲಾದ ಮಣಿರತ್ನಂ ನಿರ್ದೇಶನದ 'ಗುರು' ಚಿತ್ರದಲ್ಲೂ ಐಶ್ವರ್ಯ ಪ್ರಮುಖ ಪಾತ್ರದಲ್ಲಿದ್ದಳು. ಈಗ ಇನ್ನೊಂದು ಸಿನಿಮಾ.

■ ಬಿಂದು

